ಸಿ.ಸಿ.ನಂ. 85/2022 ಡಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಪ್ರಕಾಶ್ ಎಂ.ಕೆ.

ದಿನಾಂಕಃ **26-04-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಎಸ್.ಹೆಚ್.ಎಲ್. ವಕೀಲರಿಂದಃ**

7) ದಿನಾಂಕಃ 07.11.2020 ರಂದು ನಾನು ನ್ಯಾಯಾಲಯದ ಕರ್ತವ್ಯಕ್ಕೆ ಹಾಜರಾಗಿದ್ದ ಕುರಿತು, ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಲಯ ನನಗೆ ನೀಡಿದ ಹಾಜರಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-10 ಎಂದು ಮತ್ತು

8) ಚನ್ನರಾಯಪಟ್ಟಣ ಪುರಸಭೆಯ ಕಾರ್ಯಾಲಯದ ಮುಖ್ಯಾಧಿಕಾರಿಗಳು, ನನಗೆ ಹಳೆಯ ಮನೆಯನ್ನು ತೆರವುಗೊಳಿಸಿ ಹೊಸ ಕಟ್ಟಡವನ್ನು ನಿರ್ಮಾಣ ಮಾಡಲು ನೀಡಿದ ಅನುಮತಿ ಪತ್ರದ ನಕಲು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-11 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ ಎ.ಪಿ.ಪಿ. ವಕೀಲರಿಂದಃ**

9) 2020 ನೇ ಸಾಲಿನಲ್ಲಿ ನಾನು ಸಕಲೇಪುರ ನ್ಯಾಯಾಲಯದಲ್ಲಿ ಬೇಲೀಫ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಕರ್ತವ್ಯಕ್ಕೆ ಹಾಜರಾದಾಗ ಪ್ರತಿದಿನ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುತ್ತೇನೆ ಎಂದರೆ ಸರಿ. ನಮ್ಮ ನ್ಯಾಯಾಲಯದ ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಲು ಸಾಧ್ಯವಿಲ್ಲ. ನಿಡಿ-10 ರಲ್ಲಿ ಕಚೇರಿ ಕರ್ತವ್ಯದ ಸಮಯವನ್ನು ತಿಳಿಸಿಲ್ಲ ಎಂದರೆ ಸರಿ. ನಿಡಿ-10 ರಲ್ಲಿ ಕೇವಲ ದಿನಾಂಕವನ್ನು ನಮೂದಿಸಿ ಈ ಕೇಸಿಗೆ ಅನುಕೂಲವಾಗಲೆಂದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಹಾಜರಾತಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

10) ನಾನು ಮನೆ ಕಟ್ಟಿರುವುದು ನಿಜವೆಂದು ಹೇಳಲು ನಿಡಿ-11 ನ್ನು ಹಾಜರುಪಡಿಸಿರುತ್ತೇನೆ. ಈ ದಾಖಲೆ ಪ್ರಕಾರ ನಾನು 2021 ರಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸರಿ. ನಾನು ಮನೆ ಕಟ್ಟಿರುವ ವಿಷಯಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ವಕೀಲರು ಪಿರ್ಯಾದುದಾರರ ಪಾಟೀ ಸವಾಲಿನಲ್ಲಿ ಆರೋಪಿ ಪರಿಚಯವಿಲ್ಲವೆಂದು ಹೇಳಿದ್ದು, ಅದೇ ರೀತಿ ನಾನೂ ಕೂಡ ನನ್ನ ವಿಚಾರಣೆಯಲ್ಲಿ ಪಿರ್ಯಾದುದಾರರು ಪರಿಚಯವಿಲ್ಲವೆಂದು ಹೇಳಿರುತ್ತೇನೆ ಎಂದರೆ ಸರಿ.

ನಮ್ಮ ವಕೀಲರು ಪಿರ್ಯಾದುದಾರರ ಪಾಟೀ ಸವಾಲಿನಲ್ಲಿ ಪಿರ್ಯಾದುದಾರರ ತಮ್ಮ ಸುರೇಶ್ ನನಗೆ 20 ವರ್ಷಗಳಿಂದ ಪರಿಚಯ ಇದೆ ಎಂದು ಹೇಳಿದ್ದಾರೆ ಅದಕ್ಕೆ ನೀವೇನು ಹೇಳುತ್ತೀರಿ ಎಂದರೆ ಸಾಕ್ಷಿ ಪಿರ್ಯಾದುದಾರರ ತಮ್ಮ ನನಗೆ ಪರಿಚಯ ಆದರೆ ಪಿರ್ಯಾದುದಾರರು ನನಗೆ ಪರಿಚಯವಿಲ್ಲ ಎನ್ನುತ್ತಾರೆ. ಕೇಸಿಗೆ ಅನುಕೂಲವಾಗಲೆಂದು ದುರುದ್ದೇಶದಿಂದ ಈ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಿನ ಹಾಜರುಪಡಿಸಿದ ದಾಖಲೆಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.